ಗುಲಾಬೊ ಇಲಿಯಮ್ಮ ಮತ್ತು ಅವಳ ಬಲೂನುಗಳು

ಖುದ್ಸಿಯಾ ಝೈದಿ

ಅನುವಾದ :
ಎಚ್. ನಾಗರಾಜಪ್ಪ



ಚಿತ್ರಗಳು :
ನಿರೇನ್ ಸೇನ್ ಗುಪ್ತ



ISBN 978-81-237-1437-0

ಮೊದಲ ಮುದ್ರಣ : 1995
ಮೂರನೆಯ ಮರುಮುದ್ರಣ : 2021 (ಶಕ 1943)

Begum Gulabo Mousie and Her Balloons (*English*)
Gulabo Iliyamma Mattu Avala Baloonugalu (*Kannada*)

₹ 45.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in

ನೆಹರೂ ಬಾಲ ಪುಸ್ತಕಾಲಯ

ಗುಲಾಬೊ ಇಲಿಯಮ್ಮ ಮತ್ತು ಅವಳ ಬಲೂನುಗಳು

ಖುದ್ಸಿಯಾ ಝೈದಿ

ಅನುವಾದ :
ಎಚ್. ನಾಗರಾಜಪ್ಪ

ಚಿತ್ರಗಳು :
ನಿರೇನ್ ಸೇನ್ ಗುಪ್ತ





nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ





ಗುಲಾಬೊ ಇಲಿಯಮ್ಮ ಚೆಂದವಾದ ಒಬ್ಬ ಪುಟ್ಟ ಹೆಂಗಸು. ಊರ ಹೊರಗಿನ ಹಳೇ ಮಾವಿನಮರದ ಬುಡದಲ್ಲಿ ಬೇರುಗಳ ನಡುವೆ ಆಕೆಯ ಅಂಗಡಿ ಇತ್ತು. ಅಲ್ಲಿ ರುಚಿಯಾದ ತಿಂಡಿಗಳೂ ಸುಂದರವಾದ ಆಟಿಕೆಗಳೂ ಇದ್ದವು. ಸಿಹಿ ತಿಂಡಿಗಳನ್ನು ತುಂಬಿದ ಸಣ್ಣಸಣ್ಣ ಗಾಜಿನ ಡಬ್ಬಿಗಳನ್ನು ಆಕೆ ಸಾಲುಸಾಲಾಗಿ ಕಪಾಟಿನಲ್ಲಿ ಇಟ್ಟಿದ್ದಳು. ಗೊಂಬೆಗಳನ್ನು ಒಂದು







ಮೂಲೆಯಲ್ಲಿ ಸಣ್ಣ ಮೇಜಿನ ಮೇಲೆ ಒಪ್ಪವಾಗಿ ಜೋಡಿಸಿದ್ದಳು. ದೊಡ್ಡವರಿಗೆ ಬೇಕಾದ ಸೂಜಿ, ದಾರ, ಗುಂಡಿ, ಲೇಸು ಮತ್ತು ಹುಕ್ಸುಗಳೂ ಅಲ್ಲಿ ಇದ್ದವು.

ತಮಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಸಮೀಪದಲ್ಲಿ ವಾಸವಾಗಿದ್ದ ಇಲಿಯಮ್ಮಂದಿರೆಲ್ಲ ಗುಲಾಬೋಳ ಅಂಗಡಿಗೇ ಬರುತ್ತಿದ್ದರು.

ಮಳೆಗಾಲ ಮುಗಿಯಿತು. ಗುಲಾಬೊ ತನ್ನ ಅಂಗಡಿಗೆ ಬೇಕಾದ ವಸ್ತುಗಳನ್ನು ತರಲು ಪಟ್ಟಣಕ್ಕೆ ಹೋಗಲು ತೀರ್ಮಾನಿಸಿದಳು. ಆಕೆ ಹೂವಿನ ಚಿತ್ತಾರಗಳ ಮೇಲಂಗಿ ಮತ್ತು ಕೆಂಪು



ಬಣ್ಣದ ಲಂಗವನ್ನು ತೊಟ್ಟುಕೊಂಡಳು. ತಲೆಯ ಮೇಲೆ ಹಳದಿ ಬಣ್ಣದ 'ಒಡನಿ'ಯನ್ನು ಮೇಲುಹೊದಿಕೆಯಾಗಿ ಹಾಕಿಕೊಂಡಳು. ದೊಡ್ಡದೊಂದು ಕೈಚೀಲವನ್ನು ಹಿಡಿದುಕೊಂಡು ಹೊರಡಲು ಅಣಿಯಾದಳು.

ಆಗ ಭೂರೆಪ್ಪನ ಗಾಡಿ ಹತ್ತಿರದಲ್ಲಿಯೇ ನಿಂತಿತ್ತು. ಅದನ್ನು ಹತ್ತಿ ಗುಲಾಬೊ ಪೇಟೆಗೆ ಹೊರಟಳು. ದಾರಿಯಲ್ಲಿ ಯಾರಾದರೂ ಗೆಳೆಯರು ಸಿಕ್ಕರೆ ದಯಾಳು ಭೂರೆಪ್ಪ ಗಾಡಿಯನ್ನು



ನಿಲ್ಲಿಸಿ ಅವರನ್ನೂ ಹತ್ತಿಸಿಕೊಳ್ಳುತ್ತಿದ್ದ. ಹಾಗಾಗಿ ಪಟ್ಟಣವನ್ನು ತಲುಪುವ ಹೊತ್ತಿಗೆ ಆ ಗಾಡಿ ತುಂಬಿ ಹೋಗಿತ್ತು. ಕೆಲವರು ತಮಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಬಂದಿದ್ದರು. ಮತ್ತೆ ಕೆಲವರು ತಾವು ಮಾಡಿದ ವಸ್ತಗಳನ್ನು ಮಾರಲು ಬಂದಿದ್ದರು. ಕೆಲವರಲ್ಲಿ ಎಳ್ಳಿನಿಂದ ಮಾಡಿದ, ಇನ್ನು ಕೆಲವರಲ್ಲಿ ಬೆಲ್ಲದಿಂದ ಮಾಡಿದ ಸಿಹಿ ತಿಂಡಿಗಳಿದ್ದವು. ಇತರೆ ಕೆಲವರು ಮಣ್ಣಿನ ಗೊಂಬೆಗಳನ್ನು ಮಾರಲು ತಂದಿದ್ದರು.







ಊರು ತಲುಪಿದೊಡನೆ ಗುಲಾಬೊ ಗಾಡಿಯಿಂದ ಇಳಿದಳು. ತನಗೆ ಬೇಕಾದ ವಸ್ತುಗಳನ್ನು ಬೇಗಬೇಗನೆ ಕೊಳ್ಳತೊಡಗಿದಳು. ಅಲ್ಲಿನ ಅಂಗಡಿಯವರೊಂದಿಗೆ ಆಕೆಗೆ ಒಳ್ಳೆಯ ಪರಿಚಯವಿತ್ತು. ಆದ್ದರಿಂದ ಆಕೆ ಎಲ್ಲರೊಡನೆ ಅದುಇದು ಮಾತಾಡಿದಳು. ಅವರ ಕುಟುಂಬದ ಕ್ಷೇಮ ಸಮಾಚಾರವನ್ನು ವಿಚಾರಿಸಿದಳು.



ಖರೀದಿಯೆಲ್ಲ ಮುಗಿದ ಮೇಲೆ ಗುಲಾಬೋಳ ಕೈಚೀಲ ತುಂಬಿ ಹೋಗಿತ್ತು. ಆಕೆ ಗಾಡಿಯ ಬಳಿಗೆ ಮರಳಿ ಬರುವಾಗ ಒಂದು ಅಂಗಡಿಯಲ್ಲಿ ಕೆಲವು ಬಲೂನುಗಳನ್ನು ನೋಡಿದಳು. "ಇವನ್ನೂ ಕೊಳ್ಳಬೇಕು. ಹಳ್ಳಿಯ ಮಕ್ಕಳು ಇವನ್ನು ಇಷ್ಟಪಡುತ್ತಾರೆ. ಇವನ್ನು ಕೊಳ್ಳಲು ನನ್ನ ಅಂಗಡಿಗೆ ಬರುತ್ತಾರೆ" ಎಂದುಕೊಂಡಳು.



ಗುಲಾಬೊ ಪ್ರತೀ ಬಣ್ಣದ ಎರಡೆರಡು ಬಲೂನುಗಳನ್ನು ಕೊಂಡು ಗಾಡಿ ಹತ್ತಿದಳು. ಗಾಡಿ ಹೊರಟಾಗ ಬಲೂನುಗಳು ಗಾಳಿಯಲ್ಲಿ ಹಾರಾಡತೊಡಗಿದವು. ಗಾಡಿಯಲ್ಲಿದ್ದ ಎಲ್ಲರೂ ಅವನ್ನು ನೋಡಿ ಆನಂದಿಸಿದರು.

ಇಡೀ ದಿನದ ಓಡಾಟದಿಂದ ಗುಲಾಬೊ ದಣಿದಿದ್ದಳು. ಮನೆ ತಲುಪಿದ ಕೂಡಲೆ ಆಕೆ ಬೇರೆ ಏನೂ ಕೆಲಸ ಮಾಡಲಿಲ್ಲ. ನೇರವಾಗಿ ಅಡಿಗೆಮನೆಗೆ ಹೋಗಿ ಬಿಸಿಬಿಸಿ ಚಹಾ





ಮಾಡಿದಳು. ಚಹಾ ಕುಡಿದು ಸುಧಾರಿಸಿಕೊಂಡಳು. ನಂತರ ಹೊಸದಾಗಿ ತಂದಿದ್ದ ವಸ್ತುಗಳನ್ನು ಕಪಾಟಿನ ಮೇಲೆ ಜೋಡಿಸಲು ಅಂಗಡಿಗೆ ಬಂದಳು.

ವಸ್ತುಗಳನ್ನು ಜೋಡಿಸುತ್ತಿದ್ದಾಗ, ಆಕೆಗೆ ಎಲ್ಲಿಂದಲೋ ಸಣ್ಣಗೆ ಕರಕರ ಎಂಬ ಶಬ್ದ ಕೇಳಿ ಬಂತು.





"ಏನಿರಬಹುದು?" ಎಂದು ಗುಲಾಬೋಗೆ ಆಶ್ಚರ್ಯವಾಯಿತು. "ಹೆಜ್ಜೇನು ಹುಳವೇನಾದರೂ ಅಂಗಡಿಯಲ್ಲಿ ಸಿಕ್ಕಿಹಾಕಿಕೊಂಡು ಹೊರಗೆ ಹೋಗಲು ಪ್ರಯತ್ನಿಸುತ್ತಿರಬಹುದೆ?" ಎಂಬ ಅನುಮಾನ ಬಂತು. ಆಕೆ ಡಬ್ಬಿ ಮತ್ತು ಪೆಟ್ಟಿಗೆಗಳ ಹಿಂಬದಿಯನ್ನೆಲ್ಲ ನೊಡಿದಳು. ಆಟಿಕೆಗಳನ್ನೆಲ್ಲ ಸರಿಸಿ ನೋಡಿದಳು. ಎಲ್ಲೆಡೆಯೂ ಹುಡುಕಾಡಿದಳು. ಆದರೆ ಏನೂ ಕಂಡು ಬರಲಿಲ್ಲ. ಆದರೂ, ತಂದ ವಸ್ತುಗಳನ್ನೆಲ್ಲ ತನ್ನ ಕೈಚೀಲದಿಂದ ತೆಗೆದು ಕಪಾಟಿನ ಮೇಲೆ ಜೊಡಿಸುತ್ತಿದ್ದಾಗ ಆಕೆಗೆ ಆ ಶಬ್ದವು ಕೇಳಿಸುತ್ತಲೇ ಇತ್ತು.



ಎಲ್ಲವನ್ನೂ ಜೋಡಿಸಿಟ್ಟ ಮೇಲೆ ಈಗ ಬಲೂನುಗಳ ಸರದಿ. ಅವುಗಳನ್ನು ಮಕ್ಕಳಿಗೆ ಕಾಣುವಂತೆ ಕಿಟಕಿಯ ಬಳಿ ಕಟ್ಟಿ ಹಾರಾಡಲು ಬಿಡಬೇಕು ಎಂದುಕೊಂಡಳು. ಬಲೂನುಗಳನ್ನು ಮಕ್ಕಳು ಹೊರಗಿನಿಂದಲೇ ನೋಡುತ್ತಾರೆ, ಮನೆಗೆ ಹೋಗಿ ಅವರ ತಾಯಂದಿರಿಂದ ಹಣ ಪಡೆದುಕೊಂಡು ಬಂದು ಕೊಳ್ಳುತ್ತಾರೆ ಎಂಬುದು ಅವಳ ಆಲೋಚನೆಯಾಗಿತ್ತು.



ಗುಲಾಬೊ ಬಲೂನುಗಳ ದಾರವನ್ನು ಬಿಚ್ಚುತ್ತಿದ್ದಂತೆಯೆ, "ದಯಮಾಡಿ ನಾನು ಹೊರಗೆ ಬರುವಂತೆ ಮಾಡಿ, ನಿಮ್ಮ ದಮ್ಮಯ್ಯ!" ಎಂಬ ಸಣ್ಣ ಧ್ವನಿ ಕೇಳಿಸಿತು.

ಗುಲಾಬೊ, "ಈ ಧ್ವನಿ ನಿಜವಾಗಿಯೂ ಬಲೂನುಗಳಿಂದಲೇ ಬರುತ್ತಿದೆ" ಎಂದುಕೊಂಡಳು. ಅವುಗಳನ್ನು ತನ್ನ ಕಿವಿಯ ಹತ್ತಿರ ಹಿಡಿದು ನೋಡಿದಳು. ಹೌದು, ಒಂದು ಕೆಂಪು ಬಲೂನಿನಿಂದ ಆ ಧ್ವನಿ ಕೇಳಿಸುತ್ತಿತ್ತು.

ಗುಲಾಬೊ ಓಡಿ ಹೋಗಿ ಸೂಜಿಯನ್ನು ತಂದು ಆ ಬಲೂನಿಗೆ ಚುಚ್ಚಿದಳು. ಆಗ ಗಟ್ಟಿಯಾದ ಶಬ್ದ ಉಂಟಾಯಿತು. ಜೊತೆಗೆ ಹಸಿರು ಬಟ್ಟೆ ತೊಟ್ಟ ತುಂಟ ಕಿನ್ನರ ಮಗುವೊಂದು ಹೊರಗೆ ಬಂದಿತು. "ವಂದನೆಗಳು, ನನ್ನನ್ನು ಬಿಡುಗಡೆ ಮಾಡಿದ್ದಕ್ಕೆ ತುಂಬಾ ವಂದನೆಗಳು" ಎಂದಿತು ಅದು ವಿನಯದಿಂದ.



ಗುಲಾಬೋಗೆ ಆಶ್ಚರ್ಯವಾಯಿತು. "ಅರೇ! ಯಾರು ನೀನು? ಬಲೂನಿನ ಒಳಗೆ ಹೇಗೆ ಹೋದೆ?" ಎಂದು ಕೇಳಿದಳು.

ಆ ಮಗು ಹೇಳಿತು: "ಸೂರ್ಯಕಿರಣದಲ್ಲಿ ನನ್ನ ವಾಸ. ಇಂದು ಬೆಳಿಗ್ಗೆ ಏಣಿಯ ಮೂಲಕ ಸೂರ್ಯಕಿರಣವನ್ನು ಇಳಿದು ಗೆಳೆಯರೊಡನೆ ಬಂದೆ. ಆಟಿಕೆಗಳ ಅಂಗಡಿಗೆ ಹೋಗಬೇಕೆಂಬುದು ನಮ್ಮ ಇಚ್ಛೆಯಾಗಿತ್ತು. ನಾವು ಕಣ್ಣಾಮುಚ್ಚಾಲೆ ಆಟ ಆಡತೊಡಗಿದೆವು. ಎಲ್ಲೆಲ್ಲೋ ಅಡಗಿಕೊಂಡೆವು. ನಾನು ಈ ಬಲೂನಿನಲ್ಲಿ ಅಡಗಿಕೊಂಡೆ. ಒಳಗೆ ಇದ್ದಾಗ ಯಾರೋ ಹೊರಗಿನಿಂದ ಗಾಳಿ ತುಂಬಿ ಅದರ ಬಾಯನ್ನು ದಾರದಿಂದ ಕಟ್ಟಿದರು. ಬಲೂನನ್ನು ಒಡೆದು ಹೊರಗೆ ಬಂದು ಸೂರ್ಯಕಿರಣದ ಮೂಲಕ ಸಂಜೆಯಾಗುವುದರೊಳಗೆ ಮನೆಗೆ ಹೋಗಬಹುದು ಎಂದು ಮೊದಲು ಯೋಚಿಸಿದ್ದೆ. ಈಗ ಏನು ಮಾಡುವುದೋ ತೋಚುತ್ತಿಲ್ಲ. ನನ್ನ ಏಣಿ ಆ ಆಟಿಕೆಯ ಅಂಗಡಿಯಲ್ಲಿದೆ. ಹಾಗಾಗಿ ನಾನು ಸೂರ್ಯ ಕಿರಣವನ್ನು ಏರಲು ಸಾಧ್ಯವಿಲ್ಲ. ನಾನು ವಾಪಾಸು ಮನೆಗೆ ಹೋಗುವುದು ಹೇಗೆ?"

ಸಹಾನುಭೂತಿಯಿಂದ ಗುಲಾಬೋ ಹೇಳಿದಳು, "ಚಿಂತಿಸಬೇಡ ಮಗು. ಈಗ ತಡವಾಗಿದೆ, ಇಲ್ಲೇ ಮಲಗು. ನಾಳೆ ಬೆಳಗ್ಗೆ ನಿನ್ನನ್ನು ಆಟಿಕೆಗಳ ಅಂಗಡಿಗೆ ಕರೆದೊಯ್ಯುತ್ತೇನೆ. ನಿನ್ನ ಏಣಿಯನ್ನು ಅಲ್ಲಿ ಹುಡುಕಬಹುದು. ನಂತರ ಏಣಿಯನ್ನು ಹತ್ತಿ ಸೂರ್ಯ ಕಿರಣವನ್ನು ಮುಟ್ಟಿ ಮನೆಗೆ ಮರಳಬಹುದು."

ಗುಲಾಬೊ ಖಾಲಿಯಾದ ಒಂದು ಸಣ್ಣ ಸಾಬೂನಿನ ಪೆಟ್ಟಿಗೆಯನ್ನು ಹುಡುಕಿದಳು. ಅದರೊಳಗೆ ಚಿಕ್ಕ ಚಾಪೆ ಮತ್ತು ತಲೆದಿಂಬು ಇಟ್ಟು ಮೆತ್ತನೆಯ ಹಾಸಿಗೆಯನ್ನು ಅಣಿಗೊಳಿಸಿದಳು. ಮಗುವಿಗೆ ಹೊದೆಯಲು ಮೃದುವಾದ ಪುಟ್ಟ ದುಪಟಿಯನ್ನು ಕೊಟ್ಟಳು.

ಮರುದಿನ ಬೆಳಿಗ್ಗೆ ಗುಲಾಬೊ ಅಡಿಗೆಮನೆಗೆ ಹೋದಾಗ ಮಗು ಶಾಂತವಾಗಿ ಇನ್ನೂ ಮಲಗಿತ್ತು. ಆಕೆ ಕಿಟಕಿಯನ್ನು ತೆರೆದಾಗ ಒಳಗೆ ಬಂದ ಬೆಳಕಿಗೆ ಮಗುವಿಗೆ ಎಚ್ಚರವಾಯಿತು. "ಸುಪ್ರಭಾತ, ಗುಲಾಬೊ ಅಮ್ಮ" ಎಂದಿತು ಅದು. "ಬಾ ಮಗು, ನಾನು ನಿನಗೆ ತಿಂಡಿ ಕೊಡುವೆ. ತಿಂಡಿ ತಿಂದ ಮೇಲೆ ಹೊರಡುವಿಯಂತೆ. ನಿನಗೇನು ಕೊಡಲಿ?" ಎಂದು ಕೇಳಿದಳು ಗುಲಾಬೊ.

"ಸಾಮಾನ್ಯವಾಗಿ ನನಗೆ ಒಂದು ಗುಟುಕು ಇಬ್ಬನಿ ಸಾಕು. ಈ ದಿನ ನೀನು ಏನು ಕೊಟ್ಟರೂ ಆದೀತು" ಎಂದಿತು ಮಗು.




ಗುಲಾಬೊ ಹಾಲು ಮತ್ತು ರೊಟ್ಟಿಯ ತುಣುಕುಗಳ ಒಂದು ಪುಟ್ಟ ಬಟ್ಟಲನ್ನು ತಂದಳು. ತಿನ್ನಲು ಒಂದು ಚಮಚವನ್ನು ಕೊಟ್ಟಳು.

ಅವರು ತಿಂಡಿ ತಿನ್ನುತ್ತಿದ್ದಾಗ, ತಂಪು ಕನ್ನಡಕ ಕೊಳ್ಳಲು ಅಂಗಡಿಗೆ ಬಂದ ಚೂಚೂ ಗುಬ್ಯಪ್ಪ, "ಈ ನಿನ್ನ ಅತಿಥಿ ಯಾರು?" ಎಂದು ಕೇಳಿದನು. ಗುಲಾಬೊ ಅವನಿಗೆ ಆ ಮಗು ಮತ್ತು ಬಲೂನಿನ ಕಥೆಯನ್ನು ವಿವರಿಸಿದಳು.









"ನನ್ನ ಜೊತೆಗಿರುವ ನನ್ನ ಚಿಕ್ಕಪ್ಪನ ಮಗ ಚಿರ್‌ಚಿರ್ ಇವೊತ್ತು ವಾಪಾಸು ಊರಿಗೆ ಹೋಗುವವನಿದ್ದಾನೆ. ಈ ಮಗುವನ್ನೂ ಅವನೊಡನೆ ಕಳಿಸಬಹುದು" ಎಂದನು ಚೂಚೂ.

"ನಿನಗೆ ವಂದನೆಗಳು" ಎಂದಳು ಗುಲಾಬೊ. ಮಗು ಸಂತೋಷದಿಂದ ಕುಣಿದಾಡಿತು.

ಅವರು ಚಿರ್‌ಚಿರ್‌ಗಾಗಿ ಕಾಯುತ್ತಿದ್ದಾಗ, ಮಗು ಅಂಗಡಿಯತ್ತ ಕಣ್ಣು ಹಾಯಿಸಿತು. "ನಿನಗೇನು ಬೇಕೋ ತೆಗೆದುಕೋ" ಎಂದಳು ಗುಲಾಬೊ.

ಅಲ್ಲಿ ಇದ್ದವೆಲ್ಲವೂ ಚಂದದ ವಸ್ತುಗಳೇ ಆಗಿದ್ದವು. ಆರಿಸಿಕೊಳ್ಳುವುದು ಕಷ್ಟವಾಯಿತು. ಕೊನೆಗೆ, ಮಗುವು ಒಂದು ಸಣ್ಣ ಡೋಲನ್ನು ಆರಿಸಿಕೊಂಡಿತು.



ಆಗಲೇ ಚೂಚೂ ಮತ್ತು ಚಿರ್‌ಚಿರ್ ಬಂದರು. ಗುಲಾಬೋ ಮಗುವನ್ನು ಚಿರ್‌ಚಿರ್ ಬೆನ್ನಿನ ಮೇಲೆ ಕೂರಿಸಿದಳು.

"ಹೋಗಿ ಬಾ, ಒಳ್ಳೆಯದಾಗಲಿ. ನನ್ನನ್ನು ಮರೆಯಬೇಡ, ಮಗು. ಮತ್ತೊಮ್ಮೆ ನನ್ನನ್ನು ನೋಡಲು ಬಾ" ಎಂದು ಗುಲಾಬೊ ಹೇಳುವಾಗ ಆಕೆಗೆ ಅಳು ಬಂದಿತ್ತು.

ಮಗು ಹಾಗೆಯೇ ಆಗಲಿ ಎಂದು ಹೇಳಿ ಚಿರ್‌ಚಿರ್ ಬೆನ್ನೇರಿ ಹಾರಿ ಹೋಯಿತು. ಗುಲಾಬೊ ತನ್ನ ಕಣ್ಣಿನಿಂದ ದೂರವಾಗುವ ತನಕ ಮಗು ಅದರ ಕರವಸ್ತ್ರವನ್ನು ಬೀಸುತ್ತಲೇ ಇತ್ತು.



Printed at Infinity Advertising Services Private Limited



nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 45.00
ISBN 812371437-8
9 788123 714370
21221749
Begam Gulabo Mousie and Her Balloons *(Kannada)*